ಅ) ವರ್ಷ	ಮಂಜೂರಾದ ಮನೆಗಳು
1994-95	752
1995-96	372
1996-97	-

ಆ) ವರ್ಷ	ಬಿಡುಗಡೆಯಾದ ಹಣ	ಬಿಡುಗಡೆ ಬಾಕಿಯಿರುವ ಹಣ
1994-95	53.93	58.86
1995-96	38.45	35.95
1996-97	ಬಿಡುಗಡೆಯಾಗಿಲ್ಲ	

ವಿಷಯ:- ಗದಗ-ಬೆಟಗೇರಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿವಿಷನಲ್ ಕಛೇರಿ ಕಟ್ಟಡದ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 237 (512)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗದಗ-ಬೆಟಗೇರಿ ಅವಳಿ ನಗರದಲ್ಲಿ ಕೆಎಸ್ಆರ್‌ಟಿಸಿ ಡಿವಿಜನಲ್ ಕಛೇರಿ ಆರಂಭವಾಗಿ ನಾಲ್ಕು ವರ್ಷಕ್ಕೂ ಅಧಿಕ ಕಾಲವಾದರೂ ಈವರೆಗೂ ಅದು ತನ್ನ ಆಡಳಿತ ಕಛೇರಿ ಕಟ್ಟಡ ಹೊಂದದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಕೆಎಸ್ಆರ್‌ಟಿಸಿ ಡಿವಿಜನ್ ಹೊಸ ಕಟ್ಟಡ ಹಾಗೂ ಎಲ್ಲಾ ಸೌಲಭ್ಯ ಹೊಂದಿದ ಹೊಸ ಡಿವಿಜನಲ್ ವರ್ಕ್‌ಶಾಪ್ ನಿರ್ಮಿಸಿ ಆ ಭಾಗದ ಜನರ ಸಾರಿಗೆ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಗದಗ ವಿಭಾಗೀಯ ಕಾರ್ಯಾಲಯಗಳು ಲೋಕೋಪಯೋಗಿ ಇಲಾಖೆಗೆ ಸೇರಿದ ಪರಿವೀಕ್ಷಣಾಮಂದಿರ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸದರಿ ಕಟ್ಟಡವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಮತ್ತು ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ಸದರಿ ನಿವೇಶನ ಮತ್ತು ಕಟ್ಟಡಗಳ ಮೌಲ್ಯ ರೂ. 16,87,050-00ಗಳನ್ನು ಪಾವತಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಗದುಗಿನಲ್ಲಿ ಹೊಸ ಪ್ರಾದೇಶಿಕ ಕಾರ್ಯಾಗಾರ ಮತ್ತು ಆಧುನಿಕ ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತವಾದ 15 ಎಕರೆ ನಿವೇಶನವನ್ನು ಒದಗಿಸಲು ನಗರ ಸಭೆಯವರನ್ನು ಕೋರಲಾಗಿದೆ.

ವಿಷಯ:- ಭೂತನಾಳ ಕೆರೆಯ ಸುತ್ತಮುತ್ತಲಿನ ಪ್ರದೇಶಗಳ ಅತಿಕ್ರಮಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 238 (49)

ಶ್ರೀ ಬಿ.ಆರ್.ಪಾಟೀಲ್ (ಗದಗ್):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಜಾಪುರ ನಗರಕ್ಕೆ ನೀರು ಪೂರೈಸುವ ಭೂತನಾಳ ಕೆರೆಯ ಸುತ್ತಮುತ್ತಲಿನ ರೈತರಿಂದ ಅಕ್ರಮಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು? (ಅತಿಕ್ರಮಿಸಿದವರ ಹೆಸರುಗಳನ್ನು ನೀಡುವುದು)

ಇ) ಕೆರೆಯ ಸುತ್ತಮುತ್ತ ಕೊಳವೆ ಬಾವಿಗಳನ್ನು ಹಾಕಿ ತಮ್ಮ ಹೊಲಗಳಿಗೆ ನೀರಾವರಿ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸದರಿ ಕೊಳವೆ ಬಾವಿಗಳ ಮಾಲೀಕರ ಹೆಸರುಗಳನ್ನು ನೀಡುವುದು.

ಈ) ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಭೂತನಾಳ ಕೆರೆಯ ಸುತ್ತಮುತ್ತಲಿನ ಪ್ರದೇಶದ ಯಾವುದೇ ರೈತರಿಂದ ಅತಿಕ್ರಮಣವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಮೈಸೂರಿನಲ್ಲಿರುವ ಅಂಧರ ಕೈಗಾರಿಕಾ ತರಬೇತಿ ಕೇಂದ್ರದ ಸಿಬ್ಬಂದಿ ಸೇವಾ ಭದ್ರತೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 240 (770)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರಿನ ಅಂಧರ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ನೇಮಕಗೊಂಡಿರುವ